ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಪರಿಹಾರ ಉದ್ಯಮಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1977

# THE KARNATAKA RELIEF UNDERTAKINGS (SPECIAL PROVISIONS) ACT, 1977

ಬೆಂಗಳೂರು:

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿದೆ.

1980

## ಕರ್ನಾಟಕ ಪರಿಹಾರ ಉದ್ಯಮಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1977

### ವಿಷಯಾನುಕ್ರಮಣಿಕೆ


| | ಪ್ರಕರಣಗಳು: | ಪುಟಗಳು |
|---|---|---|
| 1. | ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 3 |
| 2. | ಪರಿಭಾಷೆಗಳು | 3–5 |
| 3. | ಪರಿಹಾರ ಉದ್ಯಮದ ಬಗ್ಗೆ ಘೋಷಣೆ | 5 |
| 4. | ಕೈಗಾರಿಕಾ ಸಂಬಂಧಗಳನ್ನು ಮತ್ತು ಇತರ ಸೌಲಭ್ಯಗಳನ್ನು ತಾತ್ಕಾಲಿಕವಾಗಿ ನಿರ್ದಿಷ್ಟಪಡಿಸುವ ಅಧಿಕಾರ | 5–7 |
| 5. | ಕೆಲವು ಪರಿಹಾರ ಕ್ರಮಗಳು ಇತ್ಯಾದಿಗಳ ಅಮಾನತು ಅಥವಾ ಮಾರ್ಪಾಟು | 7 |
| 6. | ಕಾಲಪರಿಮಿತಿಯ ಅವಧಿ | 7 |
| 7. | ನಿಯಮ ರಚನಾಧಿಕಾರ | 9 |
| | ಅನುಸೂಚಿ | |

**THE KARNATAKA RELIEF UNDERTAKINGS (SPECIAL PROVISIONS) ACT, 1977**

**CONTENTS**


| | **Sections:** | **Pages** |
|---|---|---|
| 1. | Short title, extent and commencement | 4 |
| 2. | Definitions | 4-6 |
| 3. | Declaration of relief undertaking | 6 |
| 4. | Power to specify industrial relation and other facilities temporarily | 6-8 |
| 5. | Suspension or modification of certain remedies etc., | 8 |
| 6. | Period of limitation | 8 |
| 7. | Power to make rules | 10 |
| | Schedule | 10 |

**ಕರ್ನಾಟಕ ಅಧಿನಿಯಮ, 1977ರ 24**

**(1977ರ ಸೆಪ್ಟಂಬರ್ ಏಳನೇ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)**

# ಕರ್ನಾಟಕ ಪರಿಹಾರ ಉದ್ಯಮಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1977

**(1977ರ ಸೆಪ್ಟೆಂಬರ್ ಒಂದನೇ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ)**

ನಿರುದ್ಯೋಗವನ್ನು ನಿವಾರಿಸುವ ಅಥವಾ ಅದರ ವಿರುದ್ಧ ಪರಿಹಾರವನ್ನು ಒದಗಿಸುವ ಕ್ರಮವಾಗಿ ಯಾವುದನ್ನು ನಡೆಸುವುದು ಅತ್ಯವಶ್ಯವೆಂದು ಪರ್ಯಾಲೋಚಿಸಲಾಗಿದೆಯೋ ಆ ಕೈಗಾರಿಕಾ ಉದ್ಯಮಗಳಿಗೆ ಸಂಬಂಧಿಸಿ ತಾತ್ಕಾಲಿಕ ಉಪಬಂಧಗಳನ್ನು ರಚಿಸುವ ಅಧಿನಿಯಮ;

ನಿರುದ್ಯೋಗವನ್ನು ನಿವಾರಿಸುವ ಅಥವಾ ಅದರ ವಿರುದ್ಧ ಪರಿಹಾರವನ್ನು ಒದಗಿಸುವ ಕ್ರಮವಾಗಿ ಯಾವುದನ್ನು ನಡೆಸುವುದು ಅತ್ಯವಶ್ಯವೆಂದು ಪರ್ಯಾಲೋಚಿಸಲಾಗಿದೆಯೋ ಆ ಕೈಗಾರಿಕಾ ಉದ್ಯಮಗಳಿಗೆ ಸಂಬಂಧಿಸಿ ವಿಶೇಷ ಉಪಬಂಧಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.** (1) ಈ ಅಧಿನಿಯಮವನ್ನು ಕರ್ನಾಟಕ ಪರಿಹಾರ ಉದ್ಯಮಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1977 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದಂಥ ದಿನಾಂಕದಂದು ಇದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ.-

(1) 'ಸರ್ಕಾರಿ ಕಂಪನಿ' ಎಂಬುದಕ್ಕೆ ಕಂಪನಿಗಳ ಅಧಿನಿಯಮ 1956ರ 617ನೇ ಪ್ರಕರಣದಲ್ಲಿ ಅದಕ್ಕೆ ಕೊಡಲಾಗಿರುವ ಅರ್ಥವೇ ಇರತಕ್ಕದ್ದು;

(2) **'ಕೈಗಾರಿಕೆ'** ಎಂದರೆ, ನಿಯೋಜಕರ ಯಾವುದೇ ವ್ಯವಹಾರ, ವ್ಯಾಪಾರ, ಉದ್ಯಮ, ತಯಾರಿಕೆ ಅಥವಾ ಕಸಬು ಮತ್ತು ಇದು ಕೆಲಸಗಾರರ ಯಾವುದೇ ಕಸಬನ್ನು, ಸೇವೆಯನ್ನು, ನಿಯೋಜನೆಯನ್ನು, ಕೈಕಸಬನ್ನು ಅಥವಾ ಔದ್ಯಮಿಕ ವೃತ್ತಿಯನ್ನು ಅಥವಾ ಉಪವೃತ್ತಿಯನ್ನು ಒಳಗೊಳ್ಳುತ್ತದೆ, ಮತ್ತು **'ಕೈಗಾರಿಕೆ'** ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(3) **'ಪರಿಹಾರ ಉದ್ಯಮ'** ಎಂದರೆ, 3ನೇ ಪ್ರಕರಣದ ಮೇರೆಗೆ ಹಾಗೆಂದು ಘೋಷಿತವಾದ ರಾಜ್ಯ ಕೈಗಾರಿಕೋದ್ಯಮ;

(4) **'ರಾಜ್ಯ ಕೈಗಾರಿಕೋದ್ಯಮ'** ಎಂದರೆ.-

**KARNATAKA ACT No. 24 OF 1977**

**(First published in the Karnataka Gazette Extraordinary on the seventh day of September 1977)**

**THE KARNATAKA RELIEF UNDERTAKINGS**

**(SPECIAL PROVISIONS) ACT, 1977**

**(Received the assent of the President on the First day of September 1977)**

An Act to make temporary provisions in respect of industrial undertakings the running of which is considered essential as a measure of preventing or of providing relief against unemployment;

Whereas it is expedient to enable the State Government to make special provisions in respect of industrial relations and other matters in relation to industrial undertaking the running of which is considered essential as a measure of preventing or of providing relief against unemployment;

Be it enacted by the Karnataka State Legislature in the Twenty-eighth Year of the Republic of India as follows:-

1. **Short title, extent and commencement.-** (1) This Act may be called the Karnataka Relief Undertakings (Special Provisions) Act, 1977.

(2) It extends to the whole of the State of Karnataka.

(3) It shall come into force on such date as State Government may, by notification, appoint.

2. **Definitions.-** In this Act, unless the context otherwise requires:

(1) 'Government Company' shall have the same meaning assigned to it in section 617 of the Companies Act, 1956;

(2) 'industry' means any business, trade, undertaking, manufacture or calling of employers and includes any calling, service, employment, handicraft or industrial occupation or avocation of workmen and the word 'industrial' shall be construed accordingly;

(3) 'relief undertaking' means a State industrial undertaking declared as such under section 3;

(4) 'State industrial undertaking' means an industrial undertaking:-

(ಕ) ರಾಜ್ಯ ಸರ್ಕಾರವು ಅಥವಾ ಸರ್ಕಾರಿ ಕಂಪನಿಯು ಯಾವುದನ್ನು ಪ್ರಾರಂಭಿಸಿದೆಯೋ ಅಥವಾ ಯಾವುದೇ ಕಾನೂನಿನ ಅಥವಾ ಒಪ್ಪಂದದ ಮೇರೆಗೆ ಯಾವುದನ್ನು ಅಥವಾ ಯಾವುದೇ ಆಡಳಿತವನ್ನು ಆರ್ಜಿಸಿದೆಯೋ ಅಥವಾ ಅನ್ಯಥಾ ತೆಗೆದುಕೊಂಡಿದೆಯೋ ಮತ್ತು ರಾಜ್ಯ ಸರ್ಕಾರದ ಅಥವಾ ಸರ್ಕಾರಿ ಕಂಪನಿಯ ಅಧಿಕಾರದ ಮೇರೆಗೆ ಅಥವಾ ಅದರ ಮೂಲಕ ಯಾವುದನ್ನು ನಡೆಸಲಾಗುತ್ತಿದೆಯೋ ಅಥವಾ ನಡೆಸಲು ಉದ್ದೇಶಿಸಲಾಗಿದೆಯೋ ಆ ಕೈಗಾರಿಕೋದ್ಯಮ; ಅಥವಾ

(ಖ) ಯಾವುದಕ್ಕೆ ಯಾವುದೇ ಸಾಲವನ್ನು ಅಥವಾ ಅನುದಾನವನ್ನು ಕೊಡಲಾಗಿದೆಯೋ ಅಥವಾ ಅದರ ಯಾವುದೇ ಸಾಲದ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಥವಾ ಸರ್ಕಾರಿ ಕಂಪನಿಯು ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮವು ಖಾತ್ರಿಯನ್ನು ಕೊಟ್ಟಿದೆಯೋ ಆ ಕೈಗಾರಿಕೋದ್ಯಮ.

**3. ಪರಿಹಾರ ಉದ್ಯಮದ ಬಗ್ಗೆ ಘೋಷಣೆ.–** ನಿರುದ್ಯೋಗದ ವಿರುದ್ಧ ಪರಿಹಾರವನ್ನು ಒದಗಿಸುವ ಕ್ರಮವಾಗಿ ನಡೆಸುತ್ತಿರುವ ರಾಜ್ಯ ಕೈಗಾರಿಕೋದ್ಯಮವನ್ನು ಸತತವಾಗಿ ಮುಂದುವರಿಸುವುದನ್ನು ಸಾಧ್ಯಗೊಳಿಸುವ ದೃಷ್ಟಿಯಿಂದ, ಸಾರ್ವಜನಿಕ ಹಿತಾಸಕ್ತಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಅಥವಾ ವಿಹಿತವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮತ್ತು ದಿನಾಂಕದಿಂದ ಹಾಗೂ ಅಂಥ ಅವಧಿಯವರೆಗೆ ಯಾವುದೇ ರಾಜ್ಯ ಕೈಗಾರಿಕೋದ್ಯಮವು ಪರಿಹಾರ ಉದ್ಯಮವಾಗಿರತಕ್ಕದ್ದೆಂದು ಅಧಿಸೂಚನೆಯ ಮೂಲಕ, ಘೋಷಿಸಬಹುದು:

ಪರಂತು, ಹಾಗೆ ನಿರ್ದಿಷ್ಟಪಡಿಸಲಾದ ಅವಧಿಯು, ಮೊದಲ ಬಾರಿ ಎರಡು ವರ್ಷಗಳನ್ನು ಮೀರತಕ್ಕದ್ದಲ್ಲ, ಆದರೆ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದಂಥ ಯಾವುದೇ ಅವಧಿಯವರೆಗೆ ಕಾಲಕಾಲಕ್ಕೆ ಅಂಥದೇ ಅಧಿಸೂಚನೆಯ ಮೂಲಕ ಅದನ್ನು ವಿಸ್ತರಿಸಬಹುದು, ಆದರೂ ಅದು ಒಟ್ಟಿನಲ್ಲಿ ಹತ್ತು ವರ್ಷಗಳನ್ನು ಮೀರತಕ್ಕದ್ದಲ್ಲ.

**4. ಕೈಗಾರಿಕಾ ಸಂಬಂಧಗಳನ್ನು ಮತ್ತು ಇತರ ಸೌಲಭ್ಯಗಳನ್ನು ತಾತ್ಕಾಲಿಕವಾಗಿ ನಿರ್ದಿಷ್ಟಪಡಿಸುವ ಅಧಿಕಾರ.–** (1) ಯಾವುದೇ ಕಾನೂನಿನಲ್ಲಿ, ಆಚರಣೆಯಲ್ಲಿ, ರೂಢಿಯಲ್ಲಿ, ಕರಾರಿನಲ್ಲಿ, ಲಿಖಿತದಲ್ಲಿ, ಡಿಕ್ರಿಯಲ್ಲಿ, ಆದೇಶದಲ್ಲಿ, ಐತೀರ್ಪಿನಲ್ಲಿ, ನಿವೇದನೆಯಲ್ಲಿ, ಇತ್ಯರ್ಥದಲ್ಲಿ, ಸ್ಥಾಯೀ ಆದೇಶದಲ್ಲಿ ಅಥವಾ ಇತರ ಉಪಬಂಧಗಳಲ್ಲಿ ಏನೇ ಇದ್ದರೂ, 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅವಶ್ಯವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು–

(ಕ) ಪರಿಹಾರ ಉದ್ಯಮದ ಸಂಬಂಧದಲ್ಲಿ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಎಲ್ಲ ಅಥವಾ ಯಾವುವೇ ಅಧಿನಿಯಮಿತಿಗಳು ಅನ್ವಯಿಸತಕ್ಕದ್ದಲ್ಲವೆಂದು ಅಥವಾ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಡಿನ, ಸೇರ್ಪಡೆಯ ಅಥವಾ ಲೋಪದ ರೂಪದಲ್ಲಿನ ಅಳವಡಿಕೆಗಳೊಂದಿಗೆ ಅನ್ವಯಿಸತಕ್ಕದ್ದೆಂದು; ಅಥವಾ

(ಖ) ರಾಜ್ಯ ಕೈಗಾರಿಕೋದ್ಯಮವನ್ನು ಪರಿಹಾರ ಉದ್ಯಮವೆಂದು ಘೋಷಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ (ಯಾವುದಕ್ಕೆ ಪರಿಹಾರ ಉದ್ಯಮವು ಒಂದು ಪಕ್ಷವಾಗಿರುವುದೋ ಅಥವಾ ಯಾವುದನ್ನು ಪರಿಹಾರ ಉದ್ಯಮಕ್ಕೆ ಅನ್ವಯಿಸಬಹುದೋ) ಆ ಎಲ್ಲ ಅಥವಾ ಯಾವುವೇ ಕರಾರುಗಳ, ಸ್ವತ್ತಿನ ಹಸ್ತಾಂತರಣ ಪತ್ರಗಳ, ಒಪ್ಪಂದಗಳ, ಇತ್ಯರ್ಥಗಳ, ಐತೀರ್ಪುಗಳ, ಸ್ಥಾಯೀ ಆದೇಶಗಳ ಅಥವಾ ಇತರ ಲಿಖಿತಗಳ ಪ್ರವರ್ತನೆಯು ಅಮಾನತ್ತಿನಲ್ಲಿರತಕ್ಕದ್ದೆಂದು ಅಥವಾ ಸದರಿ ದಿನಾಂಕಕ್ಕೆ ಮುಂಚೆ ಅದರ ಮೇರೆಗೆ ಪ್ರಾಪ್ತವಾಗುವ ಅಥವಾ ಉದ್ಭವಿಸುವ ಎಲ್ಲ ಅಥವಾ ಯಾವುವೇ ಹಕ್ಕುಗಳು, ವಿಶೇಷ ಹಕ್ಕುಗಳು, ಬಾಧ್ಯತೆಗಳು ಮತ್ತು ಹೊಣೆಗಳು, ಅಮಾನತ್ತಿನಲ್ಲಿ ಉಳಿಯತಕ್ಕದ್ದೆಂದು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳೊಡನೆ ಮತ್ತು ಅಂಥ ರೀತಿಯಲ್ಲಿ ಜಾರಿಗೊಳಿಸಬಹು–ದಾದಂಥವುಗಳಾಗಿರಕ್ಕದ್ದೆಂದು,

–ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

(a) which is started or the management of which is under any law or agreement acquired or otherwise taken over by the State Government or by a Government company and is run or proposed to be run by or under the authority of the State Government or a Government company; or

(b) to which any loan advanced or grant has been given or in respect of any loan where of, a guarantee has been given by the State Government or a Government company or a Corporation owned or controlled by the State Government.

**3. Declaration of relief undertaking.-** The State Government may, if is it satisfied that it is necessary or expedient so to do in the public interest, with a view to enable the continued running of State industrial undertaking as a measure of providing relief against unemployment, declare, by notification, that any State industrial undertaking shall on and from such date and for such period as may be specified in the notification be a relief undertaking:

Provided that the period so specified shall not exceed in the first instance two years but may by a like notification be extended from time to time by any period not exceeding one year at a time so, however, that the aggregate shall not be more than ten years.

**4. Power to specify industrial relation and other facilities temporarily.-** (1) Notwithstanding any law, usage, custom, contract, instrument, decree, order, award, submission, settlement, standing order or other provisions whatsoever, the State Government may, if satisfied that it is necessary so to do for the purpose specified in section 3, by notification, direct-

(a) that in relation to relief undertaking all or any of the enactments specified in the Schedule to this Act shall not apply or shall apply with such adaptations, whether by way of modification, addition or omission as may be specified in such notification, or

(b) that the operation of all or any of the contracts, assurances of property, agreements, settlements, awards, standing orders or other instruments in force (to which any relief undertaking is a party or which may be applicable to any relief undertaking) immediately before the date on which the State industrial undertaking is declared to be a relief undertaking shall remain suspended or that all or any of the rights, privileges, obligations and liabilities accruing or arising thereunder before the said date, shall remain suspended or shall be enforceable with such modifications and in such manner as may be specified in such notification.

(2) ಇತರ ಯಾವುದೇ ಕಾನೂನಿನಲ್ಲಿ, ಒಪ್ಪಂದದಲ್ಲಿ, ಅಥವಾ ಲಿಖಿತದಲ್ಲಿ ಅಥವಾ ನ್ಯಾಯಾಲಯದ, ನ್ಯಾಯಾಧಿಕರಣದ ಅಧಿಕಾರಿಯ ಅಥವಾ ಇತರ ಪ್ರಾಧಿಕಾರದ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಅಧ್ಯಾರೋಹೀ ಪರಿಣಾಮವುಳ್ಳದ್ದಾಗಿರತಕ್ಕದ್ದು.

**5. ಕೆಲವು ಪರಿಹಾರ ಕ್ರಮಗಳು ಇತ್ಯಾದಿಗಳ ಅಮಾನತು ಅಥವಾ ಮಾರ್ಪಾಟು.**– 4ನೇ ಪ್ರಕರಣದ (1)ನೇ ಉಪ–ಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಹಕ್ಕನ್ನು, ವಿಶೇಷ ಹಕ್ಕನ್ನು, ಬಾಧ್ಯತೆಯನ್ನು, ಹೊಣೆಯನ್ನು ಜಾರಿಗೊಳಿಸುವುದಕ್ಕಾಗಿ ಇರುವ ಮತ್ತು ಆ ಉಪ–ಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ ಅಮಾನತುಗೊಳಿಸಲಾದ ಅಥವಾ ಮಾರ್ಪಡಿಸಲಾದ ಯಾವುದೇ ಪರಿಹಾರ ಕ್ರಮವನ್ನು, ಅಧಿಸೂಚನೆಯ ನಿಬಂಧನೆಗಳಿಗನುಸಾರವಾಗಿ, ಅಮಾನತುಗೊಳಿಸತಕ್ಕದ್ದು ಅಥವಾ ಮಾರ್ಪಡಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿ ಯಾವುದೇ ನ್ಯಾಯಾಲಯದಲ್ಲಿ, ನ್ಯಾಯಾಧಿಕರಣದಲ್ಲಿ ಅಥವಾ ಅಧಿಕಾರಿಯ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳನ್ನು ಅಂಥ ಮಾರ್ಪಾಟಿಗೆ ಒಳಪಟ್ಟು ತದನುಸಾರವಾಗಿ ತಡೆಹಿಡಿಯತಕ್ಕದ್ದು ಅಥವಾ ಮುಂದುವರಿಸತಕ್ಕದ್ದು, ಆದರೂ ಈ ಅಧಿಸೂಚನೆಯು ಪರಿಣಾಮಕಾರಿಯಾಗಿರುವುದು ಮುಕ್ತಾಯವಾದ ಮೇಲೆ,–

(ಕ) ಹಾಗೆ ಅಮಾನತುಗೊಳಿಸಲಾದ ಅಥವಾ ಮಾರ್ಪಡಿಸಲಾದ ಯಾವುದೇ ಹಕ್ಕು, ವಿಶೇಷ ಹಕ್ಕು, ಬಾಧ್ಯತೆ ಮತ್ತು ಹೊಣೆಗಳು, ಅಧಿಸೂಚನೆಯನ್ನು ಹೊರಡಿಸದೇ ಇದ್ದರೆ ಹೇಗೋ ಹಾಗೆ, ಪುನಃ ಪ್ರಾಪ್ತವಾಗತಕ್ಕದ್ದು ಮತ್ತು ಜಾರಿಗೊಳಿಸುವಂಥದಿರತಕ್ಕದ್ದು; ಮತ್ತು

(ಖ) ಹಾಗೆ ತಡೆಹಿಡಿಯಲಾದ ಯಾವುದೇ ವ್ಯವಹರಣೆಯನ್ನು ಆಗ ಜಾರಿಯಲ್ಲಿರಬಹುದಾದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ವ್ಯವಹರಣೆಗಳನ್ನು ತಡೆಹಿಡಿದಾಗ ಅದು ಯಾವ ಹಂತದಲ್ಲಿದ್ದಿತೋ ಆ ಹಂತದಿಂದ ಮುಂದುವರಿಸತಕ್ಕದ್ದು.

**6. ಕಾಲಪರಿಮಿತಿಯ ಅವಧಿ.**– 4ನೇ ಪ್ರಕರಣದ (1)ನೇ ಉಪ–ಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಹಕ್ಕನ್ನು, ವಿಶೇಷ ಹಕ್ಕನ್ನು, ಬಾಧ್ಯತೆಯನ್ನು ಅಥವಾ ಹೊಣೆಯನ್ನು ಜಾರಿಗೊಳಿಸುವುದಕ್ಕಾಗಿ ಕಾಲ ಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಾಗ, ಯಾವ ಅವಧಿಯಲ್ಲಿ ಅದನ್ನು ಅಥವಾ ಅದರ ಜಾರಿಗಾಗಿರುವ ಪರಿಹಾರ ಕ್ರಮವನ್ನು ಅಮಾನತ್ತಿನಲ್ಲಿಡಲಾಯಿತೋ ಆ ಅವಧಿಯನ್ನು ಬಿಟ್ಟುಬಿಡತಕ್ಕದ್ದು.

**7. ನಿಯಮ ರಚನಾಧಿಕಾರ.**– (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು. ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಅಥವಾ ಒಂದರ ಮೇಲೊಂದು ಬರುವ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸರ್ಕಾರೀ ರಾಜಪತ್ರದಲ್ಲಿ ಅಂಥ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ, ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿ–ಯಾಗಿರತಕ್ಕದ್ದು. ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**ಅನುಸೂಚಿ**

**(ಪ್ರಕರಣ 4(1)(ಕ) ನೋಡಿ)**

1. ಔದ್ಯಮಿಕ ನಿಯೋಜನೆ (ಸ್ಥಾಯೀ ಆದೇಶಗಳ) ಅಧಿನಿಯಮ, 1946 (ಕೇಂದ್ರಾಧಿನಿಯಮ 1946ರ 20)
2. ಔದ್ಯಮಿಕ ವಿವಾದಗಳ ಅಧಿನಿಯಮ, 1947 (ಕೇಂದ್ರಾಧಿನಿಯಮ 1947ರ 14)
3. ಕನಿಷ್ಠ ಮಜೂರಿ ಅಧಿನಿಯಮ, 1948 (ಕೇಂದ್ರಾಧಿನಿಯಮ 1948ರ 11)
4. ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1962ರ 8)

(2) The notification issued under sub-section (1) shall have overriding effect notwithstanding anything to the contrary contained in any other law, agreement, or instrument or decree or order of a court, tribunal, officer or other authority.

**5. Suspension or modification of certain remedies etc.-** Any remedy for the enforcement of any right, privilege, obligation or liability referred to in clause (b) of sub-section (1) of section 4 and suspended or modified by a notification under that sub-section shall, in accordance with the terms of the notification, be suspended or modified and all proceedings relating thereto pending before any court, tribunal or officer or other authority shall accordingly be stayed or be continued subject to such modification, so, however, that on the notification ceasing to have effect-

(a) any right, privilege, obligation or liability so suspended or modified shall revive and be enforceable as if the notification had never been issued; and

(b) any proceeding so stayed shall be proceeded with subject to the provisions of any law which may then be in force from the stage which had been reached when the proceeding was stayed.

**6. Period of limitation.-** In computing the period of limitation for the enforcement of any right, privilege, obligation or liability referred to in clause (b) of sub-section (1) of section 4, the period during which it or the remedy for the enforcement thereof was suspended, shall be excluded.

**7. Power to make rules:-** (1) The State Government may, by notification, make rules to carry out the purposes of this Act.

(2) Every rule made under this Act shall be laid as soon as may be after it is made before each House of the Stae Legislature while it is in session for a total period of thirty days which may be comprised in one session or in two or more successive sessions and if before the expiry of the session immediately following the session or the successive session aforesaid both Houses agree in making any modification in the rule or both Houses agree that the rule should not be made, the rule shall, from the date on which modification or annulment is notified by the Government in the official Gazette have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under such rule.

**SCHEDULE**

**[See Section 4(1) (a)]**

1. The Industrial Employment (Standing Orders) Act, 1946 (Central Act 20 of 1946);
2. The Industrial Disputes Act, 1947 (Central Act 14 of 1947);
3. The Minimum Wages Act, 1948 (Central Act 11 of 1948);
4. The Karnataka Shops and Commercial Establishments Act, 1961 (Karnataka Act 8 of 1962)

**(ಕರ್ನಾಟಕ ಸರ್ಕಾರದಿಂದ ಪ್ರಕಟಿತ)**

**ಭಾನಿ 20/ ರಾಶಾಶಾ/ 2009**